ಹೆಚ್ಚುವರಿಯಾಗಿ 8 ಶುಶ್ರೂಷಕರುಗಳನ್ನು ನೇಮಿಸಿ ಒಳ ಹಾಗೂ ಹೊರ ರೋಗಿಗಳಿಗೆ ತೊಂದರೆಯಾಗದಂತೆ ಚಿಕಿತ್ಸೆ ನೀಡಲಾಗುತ್ತಿದೆ.

ಆ) ಉದ್ಭವಿಸುವುದಿಲ್ಲ.

ಗಂಗಾ ಕಲ್ಯಾಣ ಯೋಜನೆಯಲ್ಲಿ ಪೂರೈಕೆಯಾಗುವ ಪಂಪ್ ಸೆಟ್‌ಗಳ ಗುಣಮಟ್ಟ

222 (598) ಶ್ರೀ ಸಿದ್ದು ಸವದಿ (ತೇರದಾಳ್) ಮಾನ್ಯ ಸಮಾಜ ಕಲ್ಯಾಣ ಮತ್ತು ಬಂದೀಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಿಂದ ಗಂಗಾ ಕಲ್ಯಾಣ ಯೋಜನೆಯಲ್ಲಿ ಪೂರೈಸಲಾದ ಪ್ರತಿಯೊಂದು ಕಂಪನಿಯ ಸಬ್‌ಮರ್ಸಿಬಲ್ ಪಂಪ್‌ಸೆಟ್‌ಗಳನ್ನು ಕೊಯಮತ್ತೂರಿನ ಎಸ್.ಐ.ಟಿ.ಎ.ಆರ್.ಸಿ.ಯಲ್ಲಿ ಗುಣಮಟ್ಟದ ಪರೀಕ್ಷೆ ನಡೆಸಿದ್ದು ನಿಜವೇ;

ಆ) ಸದರಿ ಪರೀಕ್ಷೆಯ ಪ್ರಕಾರ ಎಷ್ಟು ಕಂಪನಿಯ ಪಂಪ್‌ಸೆಟ್‌ಗಳನ್ನು ಪ್ರಾರಂಭಿಸಲಾಗಿದೆ;

ಇ) ಪಾಸಾಗದ ಕಂಪನಿಗಳ ಮೇಲೆ ಏನು ಕ್ರಮ ತೆಗೆದುಕೊಳ್ಳಲಾಗಿದೆ. ಅವುಗಳನ್ನು ಕಪ್ಪು ಪಟ್ಟಿಗೆ ಸೇರಿಸಲಾಗಿದೆಯೇ; ಹಾಗಿಲ್ಲವಾದಲ್ಲಿ, ಕಾರಣಗಳೇನು;

ಈ) ಗಂಗಾ ಕಲ್ಯಾಣ ಯೋಜನೆಯ ಫಲಾನುಭವಿಗಳಾದ ಹಿಂದುಳಿದ ಮತ್ತು ದಲಿತ ರೈತರಿಗೆ ಗುಣಮಟ್ಟ ರಹಿತ ಪಂಪುಗಳನ್ನು ಮತ್ತು ಅತ್ಯಂತ ಕಳಪೆ ಮಟ್ಟದ ಸಲಕರಣೆಗಳಾದ ಕೇಬಲ್, ಪಂಪು, ಪೆನಾಲ್‌ಗಳನ್ನು ಪೂರೈಸುತ್ತದೆ ಅಂತ ಆಪಾದನೆ ಇದ್ದದ್ದು ನಿಜವೇ; ಹಾಗಿಲ್ಲದಿದ್ದಲ್ಲಿ ಯಾವ ರೀತಿ ಪರೀಕ್ಷೆ ನಡೆಸಲಾಗುವುದು?

ಶ್ರೀ ಎ. ನಾರಾಯಣಸ್ವಾಮಿ (ಸಮಾಜ ಕಲ್ಯಾಣ ಮತ್ತು ಬಂದೀಖಾನೆ ಸಚಿವರು):

ಅ) ಹೌದು.

ಆ) ಹನ್ನೊಂದು.

ಇ) ಅನುತ್ತೀರ್ಣಗೊಂಡ ಪಂಪ್‌ಸೆಟ್‌ಗಳನ್ನು ಸರಬರಾಜು ಮಾಡಿದ ಕಂಪನಿಗಳಿಗೆ ನೋಟೀಸ್ ಜಾರಿ ಮಾಡಲಾಗಿತ್ತು. ಪಂಪ್ ಸೆಟ್‌ಗಳನ್ನು ಜಿಲ್ಲೆಗಳಿಂದ ಬೆಂಗಳೂರಿಗೆ, ನಂತರ ಕೊಯಮತ್ತೂರಿಗೆ ಸಾಗಣೆ ಮಾಡುವ ಹಂತದಲ್ಲಿ, ಸಾಗಣೆ ಕಂಪನಿಯವರು ಲೋಡ್ ಮತ್ತು ಅನ್‌ಲೋಡ್ ಮಾಡುವಾಗ ಜಖಂ ಆಗಿದ್ದು, ಪಂಪ್‌ಸೆಟ್‌ಗಳ ಡೈನಾಮಿಕ್ ಬ್ಯಾಲೆನ್ಸ್

ಕಳೆದುಕೊಂಡಿದ್ದರಿಂದ ಪರೀಕ್ಷೆಯಲ್ಲಿ ವಿಫಲವಾಗಿರುವುದಕ್ಕೆ ಪ್ರಮುಖ ಕಾರಣವಾಗಿರುತ್ತದೆಂದು ಗುತ್ತಿಗೆದಾರರು ತಿಳಿಸಿರುತ್ತಾರೆ. ಪುನಃ ಅದೇ ಮಾಡೆಲ್‌ನ ಎರಡನೇ ಸ್ಯಾಂಪಲ್‌ನ್ನು ಪರೀಕ್ಷೆಗೆ ಕಳುಹಿಸಿಕೊಟ್ಟಾಗ ಸಫಲವಾಗುತ್ತದೆ. ಹಾಗಾಗಿ ಇಂತಹ ಕಂಪನಿಗಳನ್ನು ಕಪ್ಪು ಪಟ್ಟಿಗೆ ಸೇರಿಸಿರುವುದಿಲ್ಲ.

ಈ) ಆಪಾದನೆ ಇರುವುದಿಲ್ಲ.

ಬಿ.ಐ.ಎಸ್. 8034/2002 ಮಾನದಂಡಕ್ಕನುಗುಣವಾಗಿ ಸಬ್‌ಮರ್ಸಿಬಲ್ ಪಂಪ್‌ಸೆಟ್‌ಗಳನ್ನು ಹಾಗೂ ಐ.ಎಸ್. ಮಾನದಂಡ ಇರುವ ಸಂಬಂಧಿಸಿದ ಪೂರಕ ಸಾಮಗ್ರಿಗಳನ್ನು ಸಹ ಸರಬರಾಜು ಮಾಡುತ್ತಿದ್ದು, ಸರಬರಾಜು ಮಾಡುವ ಪೂರ್ವದಲ್ಲಿ ಸಬ್‌ಮರ್ಸಿಬಲ್ ಪಂಪ್‌ಸೆಟ್ ಮತ್ತು ಪೂರಕ ಸಾಮಗ್ರಿಗಳ ಗುಣಮಟ್ಟ ಪರೀಕ್ಷೆಯನ್ನು 3ನೇ ತಪಾಸಣೆ ಸಂಸ್ಥೆಯವರಿಂದ ಕೈಗೊಂಡು, ಗುಣಮಟ್ಟ ದೃಢೀಕರಿಸಿ ಪ್ರಮಾಣ ಪತ್ರ ನೀಡಿದ ನಂತರವೇ ಫಲಾನುಭವಿಗಳಿಗೆ ನೀಡಲಾಗುತ್ತಿದೆ. ಕೊಳವೆಬಾವಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿದ ದಿನಾಂಕದಿಂದ 2 ವರ್ಷಗಳವರೆಗೆ ಪಂಪ್‌ಸೆಟ್ ಹಾಗೂ ಪೂರಕ ಸಾಮಗ್ರಿಗಳಿಗೆ ಗ್ಯಾರಂಟಿ ಇರುತ್ತದೆ. ಈ ಅವಧಿಯಲ್ಲಿ ಯಾವುದೇ ದೋಷ ಕಂಡಬಂದಲ್ಲಿ ಸರಬರಾಜುದಾರರು ಅದನ್ನು ಸರಿಪಡಿಸಬೇಕು ಅಥವಾ ಬದಲಾಯಿಸಬೇಕಾಗಿರುತ್ತದೆ.

ರೈತರ ಪಂಪ್‌ಸೆಟ್ಟುಗಳಿಗೆ ಬೇಡಿಕೆಗೆ ಅನುಗುಣವಾಗಿ ವಿದ್ಯುತ್ ಮಂಜೂರಾತಿ

223 (599) ಶ್ರೀ ಸಿದ್ದು ಸವದಿ (ತೇರದಾಳ್) ಮಾನ್ಯ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೈತರ ಬೇಡಿಕೆಗೆ ಅನುಗುಣವಾಗಿ ವಿದ್ಯುತ್ ಸರಬರಾಜು ಕೊಡದೇ ಇರಲು ಕಾರಣಗಳೇನು; ಇದರಿಂದ ಇಲಾಖೆಗೆ ಭಾರಿ ನಷ್ಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ರೈತರು ಸರಬರಾಜು ಬೇಡಿದಾಗ ಕೊಡದೇ ಇರುವುದರಿಂದ ರೈತ ಅನಧಿಕೃತವಾಗಿ ಸರಬರಾಜು ಪಡೆಯುವುದರಿಂದ ಪರಿವರ್ತಕಗಳು ಸುಟ್ಟು ಕೋಟ್ಯಾಂತರ ರೂಪಾಯಿಗಳ ಹಾನಿಯಾಗುತ್ತಿದ್ದು, ಅದನ್ನು ತಡೆಯಲು ಯಾವ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು?

ಕು॥ ಶೋಭಾ ಕರಂದ್ಲಾಜೆ (ಇಂಧನ ಸಚಿವರು):

ಅ) ರಾಜ್ಯಾದ್ಯಂತ ಸರ್ಕಾರದ ಆದೇಶದಂತೆ "ಕಪ್ಪು" ಮತ್ತು "ಬೂದು" ಪ್ರದೇಶಗಳನ್ನು ಹೊರತುಪಡಿಸಿ, ಉಳಿದ ಪ್ರದೇಶಗಳಲ್ಲಿನ ರೈತರು ನೀರಾವರಿ